# ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು

## *Reproductive and Child Health Services (R.C.H.)*



ರಾಜ್ಯ ಕುಟುಂಬ ಕಲ್ಯಾಣ ವಿಭಾಗ,
ಆರೋಗ್ಯ ಮತ್ತು ಕು. ಕ. ನಿರ್ದೇಶನಾಲಯ,
ಬೆಂಗಳೂರು.
ಆಗಸ್ಟ್ 1996

# ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು

## *Reproductive and Child Health Services (R.C.H.)*

ಅನುವಾದ : ಡಾ। ಜಿ.ವಿ. ನಾಗರಾಜ್


ರಾಜ್ಯ ಕುಟುಂಬ ಕಲ್ಯಾಣ ವಿಭಾಗ,

ಆರೋಗ್ಯ ಮತ್ತು ಕು. ಕ. ನಿರ್ದೇಶನಾಲಯ,

ಬೆಂಗಳೂರು.

ಆಗಸ್ಟ್ 1996

# ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು

## *Reproductive and Child Health Services (R.C.H.)*

ಅನುವಾದ : ಡಾ| ಜಿ.ವಿ. ನಾಗರಾಜ್

ರಾಜ್ಯ ಕುಟುಂಬ ಕಲ್ಯಾಣ ವಿಭಾಗ,
ಆರೋಗ್ಯ ಮತ್ತು ಕು. ಕ. ನಿರ್ದೇಶನಾಲಯ,
ಬೆಂಗಳೂರು.
ಆಗಸ್ಟ್ 1996

# ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು

***ಡಾ|| ಜಿ.ವಿ. ನಾಗರಾಜ್

ಕಳೆದ 30-40 ವರ್ಷಗಳಿಂದ ನಮ್ಮ ದೇಶದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮವು ಒಂದು ಕಟ್ಟುನಿಟ್ಟಿನ ಹಾಗೂ ಗರ್ಭನಿರೋಧಕ ಪದ್ಧತಿಗಳಲ್ಲಿ ಗುರಿಯುಳ್ಳ ಕಾರ್ಯಕ್ರಮ ಎಂದು ಪ್ರಸಿದ್ಧಿ ಪಡೆದಿದೆ. ಶಸ್ತ್ರ ಚಿಕಿತ್ಸೆ, ವಂಕಿ ಅಳವಡಿಸಿಕೊಳ್ಳುವಿಕೆ, ನುಂಗುವ ಗುಳಿಗೆಗಳು ಮತ್ತು ನಿರೋಧ್, ಈ ನಾಲ್ಕು ಗರ್ಭನಿರೋಧಕ ಪದ್ಧತಿಗಳಲ್ಲಿನ ಕಾರ್ಯಸಾಧನೆಯನ್ನು ವರದಿ ಮಾಡಿದ ಸಂಖ್ಯೆಯಿಂದ ಮಾತ್ರ ಪ್ರಗತಿ ಅಳೆಯಲಾಗುತ್ತಿತ್ತು.

ಕುಟುಂಬ ಕಲ್ಯಾಣ ಕಾರ್ಯಕ್ರಮವು ಒಂದು ಬಲಾತ್ಕಾರದ ಮಾರ್ಗ ಎಂದು ಕೂಡ ವ್ಯಾಪಕವಾಗಿ ಆಕ್ಷೇಪಿಸಲ್ಪಟ್ಟಿದೆ.

1994ರಲ್ಲಿ ಕೈರೋದಲ್ಲಿ ನಡೆದ ಜನಸಂಖ್ಯೆ ಮತ್ತು ಬೆಳವಣಿಗೆ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಚರ್ಚಿಸಿದ ಮೇರೆಗೆ, ಮಾನವ ಕಲ್ಯಾಣ ಅಭಿವೃದ್ಧಿಯಾಗಬೇಕಾದರೆ, ಕುಟುಂಬ ಕಲ್ಯಾಣದ ಜೊತೆಗೆ ಸಂತಾನೋತ್ಪತ್ತಿ, ಆರೋಗ್ಯದಲ್ಲಿಯೂ ಸಹ ಅಭಿವೃದ್ಧಿ ಅತ್ಯಾವಶ್ಯ ಎಂದು ಒಟ್ಟಾಭಿಪ್ರಾಯ ವ್ಯಕ್ತಪಡಿಸಲಾಗಿದೆ. ''ಸಂಖ್ಯಾಧಾರಿತ ನಿರ್ದಿಷ್ಟ ಗರ್ಭನಿರೋಧಕ ಪದ್ಧತಿಗಳಲ್ಲಿ ಗುರಿಗಳು ಮತ್ತು ಧನ ಸಹಾಯ ಪ್ರೋತ್ಸಾಹ'' ಇದರ ಬದಲಾಗಿ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳ ಬಗ್ಗೆ ದೃಷ್ಟಿ ಹರಿಸಿ ಸಾಧನೆಯ ಬಗ್ಗೆ ಅಂತಿಮ ಧ್ಯೇಯಗಳನ್ನು ಅಳೆಯುವುದರ ಮೇಲೆ ಕೇಂದ್ರೀಕೃತವಾಗುವಂತೆ ಕೈರೋ ಸಮ್ಮೇಳನದಲ್ಲಿ ಸಲಹೆ ಮಾಡಿದೆ. ವಿಶೇಷವಾಗಿ ಸಂಖ್ಯಾಧಾರದ ಗುರಿಗಳ ಮೇಲೆ ಒತ್ತಾಸೆ ನೀಡುತ್ತಿರುವುದರಿಂದ, ವೈಯಕ್ತಿಕ ಆಶ್ರಿತರ ಅವಶ್ಯಕಗಳ ಮೇಲೆ ಗಮನ ಹರಿಸುತ್ತಿಲ್ಲದಿದ್ದೂ, ಗುಣಾತ್ಮಕವಾದ ಸೇವೆಗಳನ್ನು ನೀಡುತ್ತಿಲ್ಲದಿರುವುದಕ್ಕೆ ಪ್ರಮುಖ ಕಾರಣವಾಗಿದೆ.

## ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಂದ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ರೂಪಾವಳಿ

ಇಂದಿನವರೆಗೂ ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಂದಾಗಿ, ಗರ್ಭನಿರೋಧಕ ಪದ್ಧತಿಗಳ ಫಲಾನುಭವಿಗಳಲ್ಲಿ ಹೆಚ್ಚಳವಾಗಿರುವಿಕೆ ಹಾಗೂ ಫಲವತ್ತತೆಯಲ್ಲಿ ಕಡಿಮೆ ಆಗಿರುವುದನ್ನು ಅಳೆಯಲಾಗುತ್ತಿದೆ. ಈ ಸೂಚಕಗಳು ಸಂತಾನೋತ್ಪತ್ತಿ, ಆರೋಗ್ಯ ಕಾರ್ಯಕ್ರಮಗಳ ಮೇಲೆ ಆಗುವ ಪ್ರಭಾವವನ್ನು ಅಳೆಯಲು ಸಾಧ್ಯವಾಗುವುದಿಲ್ಲ. ಆದುದರಿಂದ, ಸಂತಾನೋತ್ಪತ್ತಿ ಆರೋಗ್ಯ ಸೇವೆಗಳನ್ನು ನಿಗಾವಣೆ ವಹಿಸಲು ಮತ್ತು ''ಗುಣಾತ್ಮಕ ಸೇವೆ''ಗಳನ್ನು ಅಳೆಯಲು ಹೊಸ ರೀತಿಯ ಸೂಚಕಗಳು ಅತಿ ತುರ್ತಾಗಿ ಬೇಕಾಗುವುವು.

ಈ ಹಿನ್ನೆಲೆಯಲ್ಲಿ ಭಾರತ ದೇಶದ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ವಿಶ್ವಬ್ಯಾಂಕ್ ಪ್ರಸ್ತಾಪಿಸುತ್ತಾ, ಆದಷ್ಟು ಬೇಗ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ಮಾರ್ಗವನ್ನೇ ಅನುಸರಿಸಬೇಕೆಂದು ಪ್ರಮುಖವಾದ ಸಲಹೆಗಳನ್ನು ಮಾಡಿದೆ. ವೈಯಕ್ತಿಕ ಆಶ್ರಿತರ ಆರೋಗ್ಯ ಮತ್ತು ಕುಟುಂಬ ಯೋಜನೆ ''ಅವಶ್ಯಕಗಳು'' ಹಾಗೂ ''ಉನ್ನತ ಗುಣಾತ್ಮಕ'' ಸೇವೆಗಳನ್ನು ನೀಡುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ.

---

*** ಎಂ.ಬಿ.ಬಿ.ಎಸ್., ಡಿಪಿಹೆಚ್, ಪಿಜಿ, ಡಿಹೆಚ್ಎಂ, ಎಂ.ಡಿ.,
ಹೆಚ್ಚುವರಿ ನಿರ್ದೇಶಕರು, (ಕು.ಕ. ಮತ್ತು ತಾ.ಮ.ಆ)
ರಾಜ್ಯ ಕುಟುಂಬ ಕಲ್ಯಾಣ ವಿಭಾಗ,
ಆರೋಗ್ಯ ಮತ್ತು ಕು.ಕ. ನಿರ್ದೇಶನಾಲಯ,
ಆನಂದರಾವ್ ವೃತ್ತ,
ಬೆಂಗಳೂರು - 9.

ಸಂತಾನೋತ್ಪತ್ತಿ ಆರೋಗ್ಯ ಕಾರ್ಯಕ್ರಮಗಳ ಅತಿ ಪ್ರಮುಖವಾದ ಉದ್ದೇಶವೇನೆಂದರೆ, ಬೇಡವಾದ ಫಲವತ್ತತೆಯನ್ನು ಕ್ಷೇಮಕರವಾಗಿ ಇಳಿಮುಖ ಮಾಡುವುದರ ಮೂಲಕ ವೈಯಕ್ತಿಕ ಆಶ್ರಿತರ ಅವಶ್ಯಕತೆಗಳಿಗೆ ಸ್ಪಂದಿಸುವುದು ಹಾಗೂ ಉನ್ನತ ಗುಣಾತ್ಮಕ ಆರೋಗ್ಯ ಸೇವೆಗಳ ಸೌಲಭ್ಯ ನೀಡುವುದು.

1995ನೇ ವಿಶ್ವಬ್ಯಾಂಕ್‌ನ ವರದಿಯ ಸಲಹೆಯ ಮೇರೆಗೆ ಕುಟುಂಬ ಕಲ್ಯಾಣ ಕಾರ್ಯಕ್ರಮಗಳಲ್ಲಿ ಗುರಿಗಳ ಬದಲು ಕಾರ್ಯಕ್ರಮಗಳಲ್ಲಿನ ಪ್ರಗತಿಯ ಧ್ಯೇಯಗಳು ಮತ್ತು ಪುರುಷರು 'ವ್ಯಾಸೆಕ್ಟಮಿ' ಹಾಗೂ 'ನಿರೋಧ್' ಇಂತಹ ಗರ್ಭನಿರೋಧಕ ಪದ್ಧತಿಗಳು ಅನುಸರಿಸುವ ಅಂಶಗಳ ಮೇಲೆ ಒತ್ತಾಸೆ ನೀಡಬೇಕೆಂದು ಸಲಹೆ ಮಾಡಿದೆ.

> ಸರ್ಕಾರಗಳು ಕುಟುಂಬ ಯೋಜನೆ ಕಾರ್ಯಕ್ರಮಗಳಲ್ಲಿ ಪೂರೈಸಲಾದ ಮಾಹಿತಿ ಮತ್ತು ಸೇವೆಗಳ ಕಡೆ ಅತಿ ಹೆಚ್ಚಿನ ಗಮನ ಹರಿಸಬೇಕು. ಜನ ಸಂಖ್ಯಾಧಾರಿತ ಸೂಚಕಗಳನ್ನು ಮುಟ್ಟಲು, ಸೇವೆ ನೀಡುವವರಿಗೆ ಗುರಿಗಳ ರೂಪದಲ್ಲಿ ಕಾರ್ಯಚಟುವಟಿಕೆಗಳ ಹೊರೆ ಹೊರಿಸಬಾರದು.
>
> ವಿಶ್ವಬ್ಯಾಂಕ್ 1995

ಕೇವಲ ಸಂಖ್ಯೆಗಳು ಕಡಿಮ ಮಾಡುವುದರಿಂದ ಜನಸಂಖ್ಯಾ ನಿಯಂತ್ರಣ ಮಾರ್ಗವನ್ನು ಅನುಸರಿಸುವ ಪ್ರವೃತ್ತಿಯನ್ನು ಬಿಟ್ಟು ವೈಯಕ್ತಿಕ ಮತ್ತು ದಂಪತಿಗಳ ಹಾಗೂ ಕುಟುಂಬಗಳ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳ ಕಡೆ ತೀವ್ರ ಗಮನ ಹರಿಸಿ, ಲಿಂಗ ಭೇದಗಳಿಗೆ (ಸ್ತ್ರೀ, ಪುರುಷ) ಸಂಬಂಧಪಟ್ಟ ಸೂಕ್ಷ್ಮತೆಗಳ ಹಾಗೂ ಆಶ್ರಿತರ ಅವಶ್ಯಕತೆಗಳ ಆಧಾರಿತ ಕಾರ್ಯಕ್ರಮವಾಗಬೇಕು.

> ಯೋಜಿತವಲ್ಲದ ಹಾಗೂ ಬೇಡವಾದ ಮಕ್ಕಳನ್ನು ಹಡೆಯುವುದರಿಂದ, ರೋಗರುಜಿನಗಳು ಮತ್ತು ಸಾವುಗಳ ಹೊರೆಯನ್ನು ಕಡಿಮೆ ಮಾಡುವುದೇ ಸಂತಾನೋತ್ಪತ್ತಿ ಆರೋಗ್ಯ ಕಾರ್ಯಕ್ರಮಗಳ ಮುಖ್ಯ ಗುರಿ.

## ಸಂತಾನೋತ್ಪತ್ತಿ ಆರೋಗ್ಯವೆಂದರೇನು?

''ಜನಸಂಖ್ಯೆ ಮತ್ತು ಬೆಳವಣಿಗೆ'' ಈ ವಿಷಯದಲ್ಲಿ 1994ರಲ್ಲಿ ಈಜಿಪ್ಟ್ ದೇಶದ ಕೈರೋ ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ತೀರ್ಮಾನ ಕೈಗೊಂಡಂತೆ ''ಸಂತಾನೋತ್ಪತ್ತಿ ಒಂದು ಸಂಪೂರ್ಣವಾದ ಭೌತಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಕ್ಷೇಮವಾಗಿರುವ ಪರಿಸ್ಥಿತಿ, ಕೇವಲ ಕಾಯಿಲೆ ಇಲ್ಲದೆ ಅಥವಾ ಯಾವ ರೀತಿಯ ಊನಗಳಿಲ್ಲದೆ ಇರುವುದು ಎಂದಲ್ಲ, ಅದರಲ್ಲೂ ಸಂತಾನೋತ್ಪತ್ತಿಗೆ ಸಂಬಂಧಪಟ್ಟ ಅಂಗಗಳಲ್ಲಿ ಹಾಗೂ ಇವುಗಳಲ್ಲಿನ ಕ್ರಿಯೆ ಮತ್ತು ಕಾರ್ಯವಿಧಾನದಲ್ಲಿ ಸಂಪೂರ್ಣವಾದ ಹಾಗೂ ಸಮರ್ಪಕವಾದ ವ್ಯವಸ್ಥೆ ಇದೆ ಎಂದರ್ಥ''

ಫತಲ್ಲಾ (1988) ಎಂಬ ತಜ್ಞರ ಪ್ರಕಾರ,

ಸಂತಾನೋತ್ಪತ್ತಿ ಆರೋಗ್ಯದ ಮಾರ್ಗವೆಂದರೆ,

★ ಮಾನವ ಸಂತಾನೋತ್ಪತ್ತಿ ಮಾಡಲು ಶಕ್ತನಾಗಿರಬೇಕು ಮತ್ತು ಫಲವತ್ತತೆಯನ್ನು ನಿಯಂತ್ರಿಸಬೇಕು.

★ ಮಹಿಳೆಯರು ಗರ್ಭಿಣಿ ಅವಧಿಯನ್ನು ಮತ್ತು ಮಕ್ಕಳು ಪಡೆಯುವುದನ್ನು ಸುರಕ್ಷಿತವಾಗಿ ಕೊಂಡೊಯ್ಯಬೇಕು.

★ ಕ್ಷೇಮದಿಂದ ಗರ್ಭಿಣಿ ಅವಧಿ ಫಲಿಸಬೇಕು ಹಾಗೂ ತಾಯಿ ಮತ್ತು ಮಗು ಉಳಿಯುವಂತಾಗಬೇಕು.

★ ಗರ್ಭಿಣಿಯಾಗುವ ಅಥವಾ ರೋಗಗ್ರಸ್ತ ಭಯಭೀತಿಗಳಿಲ್ಲದೆ ದಂಪತಿಗಳು ಲೈಂಗಿಕ ಸಂಬಂಧವಿಡಲು ಶಕ್ತರಾಗಬೇಕು.

ಸಂತಾನೋತ್ಪತ್ತಿ ಆರೋಗ್ಯ ಮಾರ್ಗವು ಸಂತಾನೋತ್ಪತ್ತಿ ಹಕ್ಕುಗಳು ಮತ್ತು ವ್ಯಕ್ತಿ ಸ್ವಾತಂತ್ರ್ಯದ ವಿಷಯಕ್ಕೆ ಹಾಗೂ ಮಹಿಳೆಯರ ಸ್ಥಾನಮಾನ ಮತ್ತು ಅಧಿಕಾರಕ್ಕೆ ಸಂಬಂಧಪಟ್ಟಿದ್ದು. ಹೀಗಾಗಿ ಕೇವಲ ಕುಟುಂಬ ಯೋಜನೆ ಎಂಬ ಸಂಕುಚಿತವಾದ ಮಿತಿಗೆ ಒಳಪಡದೆ, ಮಾನವ ಲೈಂಗಿಕತೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ಅವಶ್ಯಕತೆಗಳು, ಈ ಎಲ್ಲಾ ವಿಷಯಗಳನ್ನು ಜೀವನ ಚಕ್ರದ ವಿವಿಧ ಹಂತಗಳಲ್ಲಿ ಆವರಿಸಿಕೊಂಡಿರುವುದಾಗಿರುತ್ತದೆ.

**ಈ ಕಾರ್ಯಕ್ರಮವು ಕೆಳಕಂಡ ಅಂಶಗಳ ಬಗ್ಗೆ ತೀವ್ರವಾದ ಗಮನ ನೀಡುತ್ತದೆ.**

★ ತಾವೆ ಆಯ್ದುಕೊಳ್ಳಬಹುದಾದ ಕುಟುಂಬ ಕಲ್ಯಾಣ ಪದ್ಧತಿಗಳ ಬಗ್ಗೆ ಮಾಹಿತಿ ಒದಗಿಸುವುದು.

★ ಕಾಯಿಲೆಗಳನ್ನು ಪತ್ತೆ ಹಚ್ಚಲು ಸುಲಭೋಪಾಯ. (ಸ್ಕ್ರೀನಿಂಗ್)

★ ಸಮಾಲೋಚನೆ ಅವಕಾಶಗಳು.

★ ಜವಾಬ್ದಾರಿಯುತ ಮತ್ತು ಆರೋಗ್ಯಕರ ಲೈಂಗಿಕತೆ ಬಗ್ಗೆ ಶಿಕ್ಷಣ.

★ ಬೇಡವಾದ ಬಸಿರುತನವನ್ನು ತಡೆಗಟ್ಟುವಿಕೆ ಮತ್ತು ನಿರ್ವಹಣೆ.

★ ಸುರಕ್ಷಿತ ಗರ್ಭಪಾತ.

★ ತಾಯಂದಿರ ಆರೈಕೆ ಮತ್ತು ಶಿಶುವಿನ ಉಳಿವು.

★ ಸಂತಾನೋತ್ಪತ್ತಿಗೆ ಸಂಬಂಧಿಸಿದ ರೋಗರುಜಿನಗಳ ತಡೆಗಟ್ಟುವಿಕೆ ಮತ್ತು ನಿರ್ವಹಣೆ.

**ಸಂತಾನೋತ್ಪತ್ತಿ ಆರೋಗ್ಯ ಸೇವೆಗಳು ಅನುಷ್ಠಾನ ಮಾಡುವುದೆಂದರೆ, ಗುರಿಗಳನ್ನು ಸಾಧಿಸಬೇಕಾಗಿದೆ ಎಂಬ ಅಂಶದ ಮೇಲೆ ಕೇಂದ್ರೀಕೃತವಾಗಿರುವ ನಮ್ಮ ನೀತಿ, ಸಂಪ್ರದಾಯದ ಬದಲು ಅನೇಕ ಸೇವೆಗಳನ್ನು ಗುಣಾತ್ಮಕವಾಗಿ ನೀಡುವಂತಾಗಬೇಕು ಎಂದು ಅರ್ಥ.**

**ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ಉದ್ದೇಶ**

★ ಆಶ್ರಿತರಿಗೆ ಆರೋಗ್ಯ ಮತ್ತು ಕುಟುಂಬ ಯೋಜನೆಯ ಅವಶ್ಯಕತೆಗಳನ್ನು ಒದಗಿಸಿಕೊಡುವುದು.

★ ಉನ್ನತ ಗುಣಾತ್ಮಕ ಸೇವೆಗಳನ್ನು ನೀಡುವುದು.

**ಸಂತಾನೋತ್ಪತ್ತಿಗೆ ಸಂಬಂಧಪಟ್ಟ ರೋಗರುಜಿನಗಳು ಮತ್ತು ಮರಣ**

★ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 15-44 ವರ್ಷದ ಮಹಿಳೆಯರಲ್ಲಿ ಒಟ್ಟಿನಲ್ಲಿ ಮೂರನೇ ಒಂದು ಭಾಗದಷ್ಟು ಕಾಯಿಲೆಯ ಹೊರೆ, ಬಸಿರುತನದಿಂದ, ಶಿಶುಜನನದಿಂದ, ಗರ್ಭಪಾತ, ಹೆಚ್.ಐ.ವಿ. ಮತ್ತು ಜನನಾಂಗ ಮಾರ್ಗದ ಸೋಂಕು ಇವುಗಳಿಂದ ಆಗುತ್ತಿರುವುದಾಗಿ ಕಂಡುಬಂದಿದೆ.

★ ಭಾರತದ ಮಹಿಳೆಯರಲ್ಲಿ ಸಂತಾನೋತ್ಪತ್ತಿಗೆ ಸಂಬಂಧಪಟ್ಟ ರೋಗರುಜಿನಗಳಿಗೆ ಈ ಕೆಳಗಿನ ಅಂಶಗಳು ಕಾರಣವಾಗಿದೆ.

1. ಬಡತನ

2. ಶಕ್ತಿಹೀನತೆ

3. ಕಡಿಮೆ ಮಟ್ಟದ ಸಾಮಾಜಿಕ ಪರಿಸ್ಥಿತಿ

4. ಅಪೌಷ್ಟಿಕತೆ

5. ಸೋಂಕು

6. ಆರೋಗ್ಯ ಆರೈಕೆ ಸಿಗದಿರುವುದು.

★ ಪ್ರಸ್ತುತ ಪ್ರತಿಲಕ್ಷ ಜೀವಂತ ಮಕ್ಕಳು ಹುಟ್ಟುವಲ್ಲಿ 400-500 ತಾಯಂದಿರ ಮರಣಗಳು ಆಗುತ್ತಿರುವುದಾಗಿ ಅಂದಾಜು ಮಾಡಲಾಗಿದೆ.

★ ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಒಬ್ಬ ಮಹಿಳೆ ಸಾವಿಗೆ ಈಡಾಗುತ್ತಿದ್ದರೆ, ಇನ್ನೂ ಸುಮಾರು 16 ಮಹಿಳೆಯರು ಅನೇಕ ಅಪಾಯ : ತೊಂದರಗೆ ಬಲಿಯಾಗುತ್ತಿದ್ದಾರೆ.

★ ಇವುಗಳಲ್ಲದೆ ಯೋನಿಯಲ್ಲಿ ಕೊಳವೆರೋಗ ಮತ್ತು ಗರ್ಭಕೋಶದ ಕೆಳಜಾರುವಿಕೆ ಸಮಸ್ಯೆಗಳಿಂದ ಬಹಳವಾಗಿ ನರಳುತ್ತಿದ್ದಾರೆ.

# ಶಿಶು ಉಳಿವು ಮತ್ತು ಸುರಕ್ಷಿತ ತಾಯ್ತನ (ಸಿ.ಎಸ್.ಎಸ್.ಎಂ) ಕಾರ್ಯಕ್ರಮದಿಂದ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು

1985 ರಿಂದ 1991 ರವರೆಗೂ ಮಹತ್ತರವಾದ ಮತ್ತು ಅತಿ ವಿಶ್ವಾಸಾರ್ಹ ಮತ್ತು ಬೃಹತ್ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮವು (ಯು.ಪಿ.ಐ.) ಇಡೀ ರಾಷ್ಟ್ರಾದ್ಯಂತ ಅನುಷ್ಠಾನವಾಗಿ ತಾಯಿ ಮಕ್ಕಳ ಆರೋಗ್ಯ ಸುಧಾರಣೆಯಲ್ಲಿ ದಾಖಲೆ ಸ್ಥಾಪಿಸಿದೆ. ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದಾಗ ಆದರಲ್ಲೂ ವಿಶೇಷವಾಗಿ ಅತಿ ಸೂಕ್ಷ್ಮ ಸೂಚಕಗಳಾದ ಶಿಶು ಮರಣ ದರ ಮತ್ತು ತಾಯಂದಿರ ಮರಣ ದರಗಳಲ್ಲಿ ಭಾರತ ದೇಶವು ಇನ್ನೂ ಹಿಂದುಳಿದಿದೆ. ಹುಟ್ಟಿದ ಒಂದು ವಾರ ಮತ್ತು ಒಂದು ತಿಂಗಳವರೆಗೆ ಆಗುತ್ತಿರುವ ಮರಣಗಳು, ಶಿಶು ಮರಣ ದರದಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಇರುವುದು ಮತ್ತು ಪ್ರತಿ 250 ಗರ್ಭಿಣಿಯರಲ್ಲಿ ಒಬ್ಬ ತಾಯಿ ಮರಣಕ್ಕೀಡಾಗುತ್ತಿರುವುದು. ಇವುಗಳನ್ನೆಲ್ಲಾ ನೋಡಿದರೆ, ಲಸಿಕೆ ಕಾರ್ಯಕ್ರಮ ಒಂದೇ ತಾಯಿ ಮಕ್ಕಳ ಆರೋಗ್ಯ ಸುಧಾರಣೆ ಮಾಡಲು ಸಾಲದು; ಮತ್ತು ಸಾಧ್ಯವಾಗುತ್ತಿಲ್ಲವೆಂಬುದು ತಿಳಿದುಬರುತ್ತದೆ. ತಾಯಿ ಮತ್ತು ಮಗುವಿಗೆ ನೀಡುತ್ತಿರುವ ಲಸಿಕೆ ನೀಡಿಕೆ ಕಾರ್ಯಕ್ರಮಗಳ ಜೊತೆಗೆ ಇನ್ನಿತರ ಕೆಲವು ಕಾರ್ಯಕ್ರಮಗಳನ್ನು ಜೊತೆಗೂಡಿಸಿ ಒಟ್ಟಾರೆ ಒಂದು ಸಮಗ್ರ ಕಾರ್ಯಕ್ರಮವನ್ನು ರೂಪಿಸಿ ವಿಶ್ವಬ್ಯಾಂಕ್ ನೆರವಿನಿಂದ ಏಪ್ರಿಲ್ ತಿಂಗಳು 1992 ರಿಂದ ಸೆಪ್ಟಂಬರ್ 1996 ರ ವರೆಗೆ ''ಶಿಶು ಉಳಿವು ಮತ್ತು ಸುರಕ್ಷಿತ ತಾಯ್ತನ'' ಎಂಬ ಕಾರ್ಯಕ್ರಮವು ಎಲ್ಲಾ ರಾಜ್ಯಗಳಲ್ಲಿಯೂ ಅನುಷ್ಠಾನವಾಯಿತು.

**'ಶಿಶು ಉಳಿವು ಮತ್ತು ಸುರಕ್ಷಿತ ತಾಯ್ತನ' ಕಾರ್ಯಕ್ರಮದ ಮುಖ್ಯ ಉದ್ದೇಶ ಏನೆಂದರೆ,**

★ ತಾಯಿ ಮತ್ತು ಮಕ್ಕಳ ಆರೋಗ್ಯ ಉತ್ತಮಗೊಳಿಸುವುದು.

★ ಶಿಶು ಮರಣ ದರ (0- 1 ವರ್ಷ), ಮಕ್ಕಳ ಮರಣದರ (1-4 ವರ್ಷ) ಮತ್ತು ತಾಯಂದಿರ ಮರಣ ದರ ಕಡಿಮೆ ಮಾಡುವುದು.

**ಈ ಕಾರ್ಯಕ್ರಮದಡಿಯಲ್ಲಿ ಒಟ್ಟುಗೂಡಿಸಿ ನೀಡುತ್ತಿರುವ ಸೇವೆಗಳು ಯಾವುವೆಂದರೆ,**

ಮಕ್ಕಳಿಗೆ : -

1. ಈಗ ತಾನೇ ಜನಿಸಿದ ಶಿಶುವಿಗೆ ಅತ್ಯಾವಶ್ಯಕ ಆರೈಕೆ.
2. ಲಸಿಕೆ ನೀಡಿಕೆ (ಬಿ.ಸಿ.ಜಿ., ಡಿ.ಪಿ.ಟಿ., ಪೋಲಿಯೋ ಮತ್ತು ದಡಾರ)
3. ಅತಿಸಾರ ಭೇದಿಗೆ ಯೋಗ್ಯವಾದ ನಿರ್ವಹಣೆ.
4. ತೀವ್ರ ಶ್ವಾಸಕೋಶಗಳ ಸೋಂಕಿಗೆ (ಎ.ಆರ್.ಐ.) ಯೋಗ್ಯವಾದ ನಿರ್ವಹಣೆ.
5. 'ಎ' ಅನ್ನಾಂಗದ ರಕ್ಷಣೆ.

ತಾಯಂದಿರಿಗೆ : -

1. ಹೆರಿಗೆಯ ಮುನ್ನ ಆರೈಕೆ ಮತ್ತು ತಾಯ್ತನಕ್ಕೆ ಸಂಬಂಧಿಸಿದ ದುಷ್ಪರಿಣಾಮಗಳನ್ನು ಗುರ್ತಿಸುವುದು.
2. ಲಸಿಕೆ ನೀಡಿಕೆ (ಧನುರ್ವಾಯು ವಿರುದ್ಧ).
3. ತರಬೇತಿ ಪಡೆದ ಸಿಬ್ಬಂದಿಗಳಿಂದ ಹೆರಿಗೆ.
4. ರಕ್ತಹೀನತೆ ತಡೆಗಟ್ಟುವಿಕೆ ಮತ್ತು ಚಿಕಿತ್ಸೆ.
5. ಸಂಸ್ಥೆಗಳಲ್ಲೇ ಹೆರಿಗೆ ಆಗುವ ಹಾಗೆ ಪ್ರೋತ್ಸಾಹಿಸುವುದು.
6. ಹೆರಿಗೆ ಸಂಬಂಧಿಸಿದ 'ಅತಿ ತುರ್ತು' ಪ್ರಕರಣಗಳ ನಿರ್ವಹಣೆ.
7. ಸಂತಾನದಲ್ಲಿ ಅಂತರತೆ.

## ಅತ್ಯಾವಶ್ಯಕ ಸಂತಾನೋತ್ಪತ್ತಿ ಆರೋಗ್ಯ ಸಂಸ್ಥೆಗಳು

1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ 'ಗುರಿಗಳು' ನಿಗದಿ ಪಡಿಸದೇ ಕೆಲವು ನಿರ್ದಿಷ್ಟವಾದ ಸೂಚಕಗಳಿಂದ ಕಾರ್ಯಸಾಧನೆ ಪ್ರಗತಿಯನ್ನು ಅಳೆಯಲಾಗಿದೆ. ಇದರ ಅನುಭವದ ಮೇಲೆ 1996 ಏಪ್ರಿಲ್ ತಿಂಗಳಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ 'ಗುರಿರಹಿತ ಕುಟುಂಬ ಕಲ್ಯಾಣ ಯೋಜನೆಯನ್ನು' ಜಾರಿಗೆ ತರಲಾಗಿದೆ. ಇದಲ್ಲದೆ ಇಲ್ಲಿಯವರೆಗೂ ಬಿಡಿಬಿಡಿಯಾಗಿ ಕಾರ್ಯಗತಗೊಳಿಸುತ್ತಿದ್ದ ಕುಟುಂಬ ಯೋಜನೆ ಮತ್ತು ತಾಯಿ ಮಕ್ಕಳ ಸೇವೆಗಳ ಮೇಲೆ ಕೇಂದ್ರಿಕೃತವಾಗಿದ್ದ ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮವು, ಇನ್ನು ಮುಂದೆ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ಅಡಿಯಲ್ಲಿ ಸಮಗ್ರವಾದ ಮಾರ್ಗವನ್ನು ಅನುಸರಿಸಬೇಕಾಗುವುದು ಅಂದರೆ,

★ ಕುಟುಂಬ ಯೋಜನೆ.

ಮತ್ತು ★ ಶಿಶು ಉಳಿವು ಮತ್ತು ಸುರಕ್ಷಿತ ತಾಯ್ತನ ಕಾರ್ಯಕ್ರಮ

ಮತ್ತು ★ ಜನನಾಂಗ ಮಾರ್ಗದ ಸೋಂಕು, ಲೈಂಗಿಕ ಸಂಪರ್ಕ ಸೋಂಕು ಮತ್ತು ಏಯ್ಡ್ಸ್ ತಡೆಗಟ್ಟುವಿಕೆ.

ಮತ್ತು ★ ಕುಟುಂಬ ಕಲ್ಯಾಣ ಮತ್ತು ಆರೋಗ್ಯ ಸೇವೆಗಳಲ್ಲಿ ಆಶ್ರಿತ ಆಧಾರಿತ.

ಮತ್ತು ★ ಉನ್ನತ ಗುಣಾತ್ಮಕ ಸೇವೆಗಳು

ಇವೆಲ್ಲವೂ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳಿಗೆ ಸಮಾನಾರ್ಥಕ.

**ಅತ್ಯಾವಶ್ಯಕ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮಗಳು ಯಾವುವೆಂದರೆ,**

1. ಬೇಡವಾದ ಬಸಿರುತನ ತಡೆಗಟ್ಟುವಿಕೆ ಮತ್ತು ನಿರ್ವಹಣೆ.

2. ತಾಯಿತನ ಆರೈಕೆ.

   (ಅ) ಹೆರಿಗೆ ಮುಂಚಿತ ಸೇವೆ.

   (ಆ) ಹೆರಿಗೆ ಸಂದರ್ಭದ ಸೇವೆ.

   (ಇ) ಬಾಣಂತಿ ಸೇವೆ.

3. ಮಕ್ಕಳ ಉಳಿವು.

4. ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕದ ಸೋಂಕು.

**ಮೇಲಿನ ಆರೋಗ್ಯ ಸಾಧಕಗಳನ್ನು ವಿವಿಧ ಮಟ್ಟಗಳಲ್ಲಿ ಅನುಷ್ಠಾನ ಮಾಡುವ ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ.**

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
## (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಮಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| 1. ಬೇಡವಾದ ಬಸುರಿತನ ತಡೆಗಟ್ಟುವಿಕೆ ಮತ್ತು ನಿರ್ವಹಣೆ | 1. ಆರೋಗ್ಯ, ಲೈಂಗಿಕತೆ, ಲಿಂಗಮಾಹಿತಿ ಮತ್ತು ಮದುವೆಯ ವಯಸ್ಸು ಇವುಗಳ ಬಗ್ಗೆ ಶಿಕ್ಷಣ ಮತ್ತು ತೊಂದರೆಗೀಡಾಗುವ ಯುವಕ ಯುವತಿಯರಿಗೆ, ಇತ್ತೀಚೆಗೆ ವಿವಾಹವಾದ ಯುವಕರಿಗೆ, ಪುರುಷರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ.<br>2. ಸಮುದಾಯ ಸಂಚಾಲನೆ ಮತ್ತು ತೊಂದರೆಗೀಡಾಗುವ ಯುವಕ ಯುವತಿಯರಿಗೆ, ಇತ್ತೀಚೆಗೆ ವಿವಾಹವಾದ ಯುವಕರಿಗೆ, ಪುರುಷರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ.<br>3. ಅಂಗನವಾಡಿ ಕಾರ್ಯಕರ್ತೆಯರು ತರಬೇತಿ ಪಡೆದ ದಾದಿಯರು, ಆರೋಗ್ಯ ಮಾರ್ಗದರ್ಶಿಗಳು, ಯು.ಬಿ.ಎಸ್. ಸಹಾಯಕರು, ನ್ಯಾಯಬೆಲೆ ಅಂಗಡಿಗಳು ಮತ್ತು ಕ್ಷೌರದ ಅಂಗಡಿಗಳ ಮೂಲಕ ಕಾಂಡೋಂ (ನಿರೋಧ) ಇವುಗಳ ಸಮುದಾಯ ಆಧಾರಿತ ಹಂಚಿಕೆ ವ್ಯವಸ್ಥೆ.<br>4. ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗೆ ಪ್ರೋತ್ಸಾಹ, ಅಂತರತೆ ಮತ್ತು ವೈದ್ಯಕೀಯ ಗರ್ಭಪಾತ ಸೇವೆ ಪಡೆಯಲು ಮೇಲ್ಮಟ್ಟಕ್ಕೆ ಕಳುಹಿಸುವಿಕೆ. | 1. ಸಮುದಾಯ ಮಟ್ಟದಲ್ಲಿನಂತೆ<br>2. ಗರ್ಭ ನಿರೋಧಕ ಗುಳಿಗೆಗಳನ್ನು ಮತ್ತು ನಿರೋಧನ್ನು ನೀಡುವಿಕೆ.<br>3. ಬೇಡವಾದ ಪ್ರಕರಣಗಳನ್ನು ಜಾಲಿಸಿದ ನಂತರ ತಾಮ್ರದ ವಂಕಿ (ಕಾಪರ್-ಟಿ) ಸೌಲಭ್ಯ ನೀಡುವಿಕೆ.<br>4. ವೈದ್ಯಕೀಯ ಗರ್ಭಪಾತ ಸೌಲಭ್ಯ ಪಡೆಯಲು ಸಮಾಲೋಚನೆ ಮತ್ತು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>5. ದುಷ್ಪರಿಣಾಮಗಳಿದ್ದಲ್ಲಿ ಪದ್ಧತಿಗೆ ಸಂಬಂಧಪಟ್ಟ ಸಮಸ್ಯೆ ಇದ್ದಲ್ಲಿ ಮತ್ತು ಅವಶ್ಯವಿದ್ದಲ್ಲಿ ಕುಟುಂಬ ಯೋಜನೆ ಪದ್ಧತಿಯಲ್ಲಿ ಬದಲಾವಣೆ ಬಗ್ಗೆ ಸಮಾಲೋಚನೆ, ನಿರ್ವಹಣೆ ಅಥವಾ ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>6. ಆಯ್ಕೆಗಳನ್ನು ಹೆಚ್ಚಿಸಲು ಇತರ ಪದ್ಧತಿಗಳನ್ನು ಪ್ರೋತ್ಸಾಹಿಸುವಿಕೆ.<br>7. ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆ ನೀಡುವಿಕೆ ಮತ್ತು ಸಮಸ್ಯೆಗಳಿದ್ದಲ್ಲಿ, ಮೇಲ್ಮಟ್ಟಕ್ಕೆ ಕಳುಹಿಸುವಿಕೆ. | ಸಂಖ್ಯೆ 1 ರಿಂದ 6 ಮತ್ತು<br>7. ನಿಗದಿತ ದಿನಗಳಂದು ಮಿನಿ ಲ್ಯಾಪ್ ಅಥವಾ ಉದರದರ್ಶಕ ಯಂತ್ರದಿಂದ ಮಹಿಳೆಯರಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ, ಶಸ್ತ್ರ ಚಿಕಿತ್ಸೆಗಾಗಿ ಕೋಣೆ ಮತ್ತು ಇತರ ಸೌಲಭ್ಯಗಳು ಒದಗಿಸಬೇಕಾಗುವುದು.<br>8. ಪುರುಷರಿಗೆ ವ್ಯಾಸೆಕ್ಟಮಿ ಶಸ್ತ್ರ ಚಿಕಿತ್ಸೆ<br>9. ಎಂಟು (8) ವಾರದವರೆಗೆ ವೈದ್ಯಕೀಯ ಗರ್ಭಪಾತ ಸೇವೆ ನೀಡುವಿಕೆ.<br>10. ಬಾಣಂತಿ ಅವಧಿಯಲ್ಲಿ ತಾಮ್ರದ ವಂಕಿ (ಕಾಪರ್-ಟಿ) ಅಳವಡಿಸುವ ವ್ಯವಸ್ಥೆ.<br>11. ಎಲ್ಲಾ ಕಾಯಿಲೆಗಳಿಗೆ ಮತ್ತು ಮೇಲ್ಮಟ್ಟಕ್ಕೆ ಕಳುಹಿಸಬೇಕಾಗುವ ಸಮಸ್ಯೆಗಳಿಗೆ ಚಿಕಿತ್ಸೆ. | ಸಂಖ್ಯೆ 1 ರಿಂದ 11<br>12. ಅವಶ್ಯವಿದ್ದ ಸಂದರ್ಭಗಳಲ್ಲಿ 20 (ಇಪ್ಪತ್ತು) ವಾರಗಳ ಅವಧಿಯ ವರೆಗೆ ವೈದ್ಯಕೀಯ ಗರ್ಭಪಾತ. |

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
## (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಪಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| | 5. ಸಾಮಾಜಿಕ ಮಾರುಕಟ್ಟೆ ಆಧಾರಿತವಾದ ಚಿತ್ರಮಂದಿರ, ಪೆಟ್ರೋಲ್ ಬಂಕ್‌ಗಳು, ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಕಾಂಡೋಂ (ನಿರೋಧ) ಮಾರಾಟ, ಮೊಟ್ಟಮೊದಲು ಗುಳಿಗೆ ಪ್ರಾರಂಭಿಸುವ ಮಹಿಳೆಯರಿಗೆ ಆರೋಗ್ಯ ಸಹಾಯಕರು ಮತ್ತು ಖಾಸಗಿ ವೈದ್ಯರುಗಳು ಗುಳಿಗೆಗಳನ್ನು ವಿತರಿಸುವಿಕೆ. | | | |
| | 6. ಆರೋಗ್ಯ ಕೇಂದ್ರಗಳಲ್ಲಿ ಪುಕ್ಕಟೆಯಾಗಿ ಸಿಗುವ ಸೌಲಭ್ಯಗಳು ಮತ್ತು ಪೂರೈಕೆಗಳ ಬಗ್ಗೆ ಅರಿವು ಮೂಡಿಸುವಿಕೆ. | | | |

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
## (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಮಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| 2. ತಾಯ್ತನದ ಆರೈಕೆ<br>ಅ) ಹೆರಿಗೆ ಮುಂಚಿತ ಸೇವೆಗಳು | 1. ಮುಂಚಿತವಾಗಿ ಗರ್ಭಿಣಿಯರ ನೋಂದಣಿ<br>2. ಗರ್ಭಿಣಿ ಪೂರ್ಣ ಅವಧಿಯಲ್ಲಿ ಸೂಕ್ತವಾದ ಆರೈಕೆಯ ಪ್ರಾಮುಖ್ಯತೆ ಮತ್ತು ಅಪಾಯಕಾರಿ ಚಿಹ್ನೆಗಳನ್ನು ಗುರುತಿಸಲು ಬಗ್ಗೆ ಅರಿವು ಮೂಡಿಸುವಿಕೆ.<br>3. ಮೇಲ್ಮಟ್ಟಕ್ಕೆ ಕಳುಹಿಸಲು ಸಾರಿಗೆ ವ್ಯವಸ್ಥೆ ಮತ್ತು ರಕ್ತ ಕೊಡುವಿಕೆ ಬಗ್ಗೆ ಸಮುದಾಯದ ಸಂಚಾಲನೆ.<br>4. ಎದೆ ಹಾಲುಣಿಸುವಿಕೆ, ಉಪಹಾರ ಊಟ, ಬಾಣಂತಿ ಅವಧಿಯಲ್ಲಿ ಕುಟುಂಬ ಯೋಜನೆ, ವಿಶ್ರಾಂತಿ ವ್ಯಾಯಾಮ, ವೈಯಕ್ತಿಕ ಶುಚಿತ್ವ ಇವುಗಳ ಬಗ್ಗೆ ಸಮಾಲೋಚನೆ ಮತ್ತು ಶಿಕ್ಷಣ.<br>5. ಐದು ಶುಚಿಯಾದ ಹೆರಿಗೆ ವಾಡಿಕೆಗಳ ಆಚರಣೆಯಿಂದ ಅಥವಾ ಸಾಮಾಜಿಕ ಮಾರು ಕಟ್ಟೆಯ ಮೂಲಕ ದೊರೆಯುವ ಹೆರಿಗೆ ಚೀಲಗಳ ಉಪಯೋಗದಿಂದ ಹೆರಿಗೆ ಯೋಜಿಸುವಿಕೆ (ಎಲ್ಲಿ? ಯಾವಾಗ? ಯಾರಿಂದ?) | ಸಂಖ್ಯೆ 1 ರಿಂದ 4 ಮತ್ತು<br>5. ಉಪಕೇಂದ್ರದಲ್ಲಾಗಲಿ, ಗ್ರಾಮಗಳಲ್ಲಿ ತಾಯಿ ಮತ್ತು ಮಗುವಿನ ಸಂರಕ್ಷಣೆ ಸಂದರ್ಭಗಳಲ್ಲಾಗಲಿ ಕನಿಷ್ಠ ಪಕ್ಷ ಮೂರು ಸಾರಿ ಸಂಪರ್ಕ.<br>6. ಮುಂಚಿತವಾಗಿ ಹೆಚ್ಚು ಅಪಾಯಕಾರಿ ಚಿಹ್ನೆಗಳನ್ನು ಮತ್ತು ತಾಯ್ತನದಲ್ಲಿ ದುಷ್ಪರಿಣಾಮಗಳನ್ನು ಗುರುತಿಸುವಿಕೆ ಮತ್ತು ಕೂಡಲೇ ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>7. ಹೆಚ್ಚು ತೊಂದರೆಗೀಡಾಗುವ ಮಹಿಳೆಯರನ್ನು ಸಂಸ್ಥೆಗಳಲ್ಲೇ (ಆಸ್ಪತ್ರೆಗಳಲ್ಲೇ) ಹೆರಿಗೆ ಪಡೆಯಲು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>8. ಮಲೇರಿಯಾ ವಿರುದ್ಧ ಚಿಕಿತ್ಸೆ ಮತ್ತು ಅನುಸರಣೆ.<br>9. ಕ್ಷಯದ ವಿರುದ್ಧ ಚಿಕಿತ್ಸೆ ಮತ್ತು ಅನುಸರಣೆ.<br>10. ಎಲ್ಲಾ ರೀತಿಯ ಸೋಂಕನ್ನು ತಡೆಗಟ್ಟಲು ಮುಂಜಾಗರೂಕತೆ. | ಸಂಖ್ಯೆ 1 ರಿಂದ 10 ಮತ್ತು<br>11. ಕ್ಷಯದ ವಿರುದ್ಧ ಚಿಕಿತ್ಸೆ.<br>12. ಜನನಾಂಗ ಮಾರ್ಗದ ಸೋಂಕನ್ನು ಪತ್ತೆ ಹಚ್ಚುವಿಕೆ ಮತ್ತು ಹೆಚ್ಚು ತೊಂದರೆಗೀಡಾಗುವ ಗುಂಪಿನವರಿಗೆ ಸಿಫಿಲಿಸ್ ಕಾಯಿಲೆ ಬಗ್ಗೆ ಪರೀಕ್ಷೆ ಮತ್ತು ಚಿಕಿತ್ಸೆ, ಪ್ರಯೋಗ ಶಾಲಾ ತಂತ್ರಜ್ಞರಿಗೆ ತರಬೇತಿ (ಸಲಕರಣೆಗಳು ಮತ್ತು ಅವಶ್ಯಕ ರಸಾಯನಿಕ ವಸ್ತುಗಳು ಬೇಕಾಗುವುದು.) | ಸಂಖ್ಯೆ 1 ರಿಂದ 12<br>13. ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕದ ಸೋಂಕು ಪತ್ತೆ ಹಚ್ಚುವಿಕೆ ಮತ್ತು ಚಿಕಿತ್ಸೆ.<br>14. ಹೆಚ್ಚು ತೊಂದರೆಗೆ ಈಡಾಗುವ ಗರ್ಭಿಣಿಯರಿಗೆ ವಾರಕ್ಕೊಮ್ಮೆ ಕ್ಲಿನಿಕ್‌ಗಳು. |

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
# (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಮಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| ಅ) ಹೆರಿಗೆ ಸಂಭ್ರದ ಸೇವೆಗಳು | 1. ಹೆರಿಗೆ ಆಗುವ ಚಿಹ್ನೆಗಳು ಮತ್ತು ಅಪಾಯದ ಚಿಹ್ನೆಗಳು (ಉದಾ : 12 ಗಂಟೆ ಮೀರಿ ಪೊರೆ ಹರಿಯುವಿಕೆ, ರಕ್ತಸ್ರಾವ ಇತ್ಯಾದಿ) ಇವುಗಳನ್ನು ಮುಂಚಿತವಾಗಿ ಗುರುತಿಸುವಿಕೆ.<br>2. ಆಸ್ಪತ್ರೆಗಳಲ್ಲಿ ಹೆರಿಗೆ ಪಡೆಯಲು ಉತ್ತೇಜಿಸುವುದು, ಇಷ್ಟವಿಲ್ಲದಿದ್ದಲ್ಲಿ ಐದು ಶುಚಿಯಾದ ಹೆರಿಗೆ ವಾಡಿಕೆಗಳನ್ನು ಪಾಲಿಸುವುದು. ತರಬೇತಿ ಪಡೆದ ದಾದಿಯರಿಂದ ಹೆರಿಗೆ ಚೀಲಗಳನ್ನು ಉಪಯೋಗಿಸುವಿಕೆ.<br>3. ಗರ್ಭಾವಸ್ಥೆಯಲ್ಲಿ ದುಷ್ಪರಿಣಾಮಗಳು ಅಥವಾ ಹೊಟ್ಟೆಯಲ್ಲಿ ತೊಂದರೆ ಗೀಡಾಗುತ್ತಿರುವ ಮಗು ಇಂತಹ ಸಂದರ್ಭಗಳಲ್ಲಿ ಆಸ್ಪತ್ರೆಯಲ್ಲೇ ಹೆರಿಗೆ ಪಡೆಯಲು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>4. ಮೇಲ್ಮಟ್ಟಕ್ಕೆ ಕಳುಹಿಸಲು ಸಾರಿಗೆ ವ್ಯವಸ್ಥೆ.<br>5. ಉಸಿರಾಟದ ತೊಂದರೆಗೀಡಾಗುವ ನವಜಾತ ಶಿಶುವನ್ನು ಪ್ರಥಮ ಮೇಲ್ಮಟ್ಟ ಘಟಕಕ್ಕೆ ಕಳುಹಿಸುವಿಕೆ.<br>6. ನವಜಾತ ಶಿಶುವಿಗೆ ಕಡಿಮೆ ಉಷ್ಣತೆ ಆಗದಂತೆ ನಿರ್ವಹಣೆ. | ಸಂಖ್ಯೆ 1 ರಿಂದ 6 ವರೆಗೆ | ಸಂಖ್ಯೆ 1 ರಿಂದ 6 ಮತ್ತು<br>7. ಹೆರಿಗೆ ಸೌಲಭ್ಯಗಳು<br>8. ಜನನಾಂಗ ದ್ವಾರದಲ್ಲಿ ಹೆರಿಗೆಯಿಂದ ಆದ ಗಾಯಗಳು ಇಲ್ಲವೆ, ಕತ್ತರಿಸುವಿಕೆಯನ್ನು ಹೊಲಿಗೆ ಹಾಕುವುದು ಮತ್ತು ಇಕ್ಕಳದಿಂದ ಹೆರಿಗೆ ಮಾಡಿಸುವುದು.<br>9. ಬಾಣಂತಿ ಅವಧಿಯಲ್ಲಿ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆ. | ಸಂಖ್ಯೆ 1 ರಿಂದ 9 ಮತ್ತು<br>10. ತೀವ್ರ ನಂಜಿನ ವಿರುದ್ಧ ಚಿಕಿತ್ಸೆ.<br>11. ಬೇರೆ ಕಡೆಯಿಂದ ಕಳುಹಿಸಲ್ಪಟ್ಟ ಗರ್ಭಿಣಿಯರಿಗೆ ಹೆರಿಗೆ ಸೌಲಭ್ಯ.<br>12. ಹೆಚ್ಚು ತೊಂದರೆಗೀಡಾಗುವ ಪ್ರಕರಣಗಳಿಗೆ ಚಿಕಿತ್ಸೆ.<br>13. ಹೆರಿಗೆಗೆ ಸಂಬಂಧ ಪಟ್ಟ ಅತಿ ತುರ್ತು ಪ್ರಕರಣಗಳು ಅರಿವಳಿಕೆ, ಸಿಸರಿಯನ್ ಶಸ್ತ್ರ ಚಿಕಿತ್ಸೆ, ಹತ್ತಿರದ ಸಂಬಂಧಿಕರಿಂದ ರಕ್ತ ಕೊಡುವಿಕೆ, ರಕ್ತನಿಧಿಗಳಿಗೆ ಮತ್ತು ವಾಹನ ಸೌಕರ್ಯಕ್ಕೆ ಬೇಕಾಗುವ ಸೇವೆಗಳು. |

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
# (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಮಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| ಇ) ಬಾಣಂತಿ ಸೇವೆಗಳು | 1. ಎದೆ ಹಾಲುಣಿಸುವಿಕೆಗೆ ಬೆಂಬಲ.<br>2. ಉಪಹಾರ, ಊಟಗಳ ಬಗ್ಗೆ ಸಮಾಲೋಚನೆ.<br>3. ಉಸಿರಾಟದ ತೊಂದರೆ ಇರುವ ನವಜಾತ ಶಿಶುವಿಗೆ ಕೃತಕ ಉಸಿರಾಟ.<br>4. ನವಜಾತ ಶಿಶುವಿಗೆ ''ಕಡಿಮೆ ಉಷ್ಣತೆ'' ಬಾರದಂತೆ ನಿರ್ವಹಣೆ.<br>5. ಮುಂಚಿತವಾಗಿ ಬಾಣಂತಿ ನಂಜು ಪತ್ತೆ ಹಚ್ಚುವಿಕೆ ಮತ್ತು ಮೇಲ್ಮಟ್ಟಕ್ಕೆ ಕಳುಹಿಸುವಿಕೆ. | ಸಂಖ್ಯೆ 1 ರಿಂದ 6ರ ವರೆಗೆ ಮತ್ತು<br>7. ದುಷ್ಪರಿಣಾಮಗಳ ಪ್ರಕರಣಗಳನ್ನು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>8. ''ತಾಯಿ ಮಾಸು'' ಹೊರಬಂದ ನಂತರ 'ಎರ್ಗೊಮೆಟ್ರಿನ್' ಇಂಜೆಕ್ಷನ್ ನೀಡುವಿಕೆ.<br>9. ತಾತ್ಕಾಲಿಕ ಕುಟುಂಬ ಯೋಜನೆ ಪದ್ಧತಿಯನ್ನು ಅನುಸರಿಸುವಂತೆ ಮನವೊಲಿಸುವಿಕೆ. | ಸಂಖ್ಯೆ 1 ರಿಂದ 9ರ ವರೆಗೆ ಮತ್ತು<br>10. ಅಂತರ್ನಾಳ ದ್ರವ ಮತ್ತು ಆಂಟಿಬಯೋಟಿಕ್ಸ್ ಕೂಡಲೇ ಪ್ರಾರಂಭಿಸಿ ದುಷ್ಪರಿಣಾಮಗಳ ಪ್ರಕರಣಗಳನ್ನು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>11. ಉಸಿರಾಟದಲ್ಲಿ ತೊಂದರೆ ಇರುವ ಮಗುವಿನ ನಿರ್ವಹಣೆ (ಕೃತಕ ಉಸಿರಾಟದ ಸಲಕರಣೆಗಳ ಸೌಲಭ್ಯ ಇರಬೇಕಾಗುವುದು.)<br>12. ಕಡಿಮೆ ಉಷ್ಣತೆ ಇರುವ ಮಗುವಿನ ನಿರ್ವಹಣೆ.<br>13. ಪುರುಷರಿಗೆ 'ವ್ಯಾಸೆಕ್ಟಮಿ' ಮತ್ತು ಮಹಿಳೆಯರಿಗೆ 'ಟ್ಯುಬೆಕ್ಟಮಿ' ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆ. | ಸಂಖ್ಯೆ 1 ರಿಂದ 12ರ ವರೆಗೆ ಮತ್ತು<br>13. ಬೇರೆ ಕಡೆಗಳಿಂದ ಕಳುಹಿಸಲ್ಪಟ್ಟ ತೊಂದರೆಗೀಡಾದ ಪ್ರಕರಣಗಳ ನಿರ್ವಹಣೆ, ನವಜಾತ ಶಿಶುವಿಗೆ ಉಸಿರಾಟದ ತೊಂದರೆಯಿಂದ ಪಾರಾಗುವಂತೆ ಕುಶಲತೆ ಪಡೆಯಲು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಹೆಚ್ಚುವರಿ ಸಲಕರಣೆಗಳು ಮತ್ತು ತರಬೇತಿಯ ಸೌಕರ್ಯಗಳು ಇರಬೇಕಾಗುವುದು.<br>(ಉದಾ : ಬಾಯಿ ಚೀಲ, ಕೃತಕ ಉಸಿರಾಟ ನೀಡುವ ಸಲಕರಣೆಯ ಚೀಲ, ಶಾಖ ಕೊಡುವ ಸಲಕರಣೆ ಇತ್ಯಾದಿಗಳು) |



CH - 100 N96
06073
COMMUNITY HEALTH CELL
LIBRARY AND DOCUMENTATION UNIT
BANGALORE.

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
# (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಮಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| 3. ಮಕ್ಕಳ ಉಳಿವು. | 1. ಎದೆ ಹಾಲುಣಿಸುವಿಕೆ, ಉಪಹಾರ, ಊಟ, ಲಸಿಕೆ ನೀಡುವಿಕೆ ಮತ್ತು ಸೇವೆಗಳನ್ನು ಉಪಯೋಗಿಸಿಕೊಳ್ಳಲು ಶಿಕ್ಷಣ.<br>2. ಕಡಿಮೆ ಹುಟ್ಟು ತೂಕ, ಅವಧಿ ಮುಗಿಯುವದೆ ಹುಟ್ಟು, ಉಸಿರಾಟದ ತೊಂದರೆ, ಸೋಂಕು, ತೀವ್ರವಾಗಿ ಬತ್ತಿ ಹೋಗಿರುವ ಮತ್ತು ನ್ಯುಮೋನಿಯಾ ಇತ್ಯಾದಿ ಹೆಚ್ಚು ಅಪಾಯಕ್ಕೀಡಾಗುವ ಮಕ್ಕಳನ್ನು ಗುರುತಿಸಿ ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>3. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಂದ ಲಸಿಕೆ ನೀಡಿಕೆ.<br>4. ಕಿರಿಯ ಮಹಿಳಾ ಆರೋಗ್ಯ ಸಹಾಯಕರಿಂದ ಎ 'ಅನ್ನಾಂಗ' ಪಾಕದ ವಿತರಣೆ.<br>5. ನ್ಯುಮೋನಿಯಾ ಪ್ರಕರಣಗಳನ್ನು ಸಮುದಾಯ ಪ್ರಯತ್ನದಿಂದ ಪತ್ತೆ ಹಚ್ಚುವಿಕೆ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕರಿಂದ ಚಿಕಿತ್ಸೆ.<br>6. ಅತಿಸಾರ ಭೇದಿ ಮತ್ತು ನ್ಯುಮೋನಿಯಾ ಪ್ರಕರಣಗಳಿಗೆ ಚಿಕಿತ್ಸೆ. | ಸಂಖ್ಯೆ 1 ರಿಂದ 6ರ ವರೆಗೆ ಮತ್ತು<br>7. ಅತಿಸಾರ ಭೇದಿಯಿಂದ ಬತ್ತಿ ಹೋದ ಪ್ರಕರಣಗಳಿಗೆ ಮತ್ತು ನ್ಯುಮೋನಿಯಾ ಪ್ರಕರಣಗಳಿಗೆ ಚಿಕಿತ್ಸೆ ಹಾಗೂ ತೀವ್ರವಾದ ಪ್ರಕರಣಗಳನ್ನು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>8. ಗಾಯಗಳಿಗೆ ಪ್ರಥಮ ಚಿಕಿತ್ಸೆ.<br>9. ಮಗು ಬೆಳವಣಿಗೆಯ ನಿಗಾವಣೆ ಮತ್ತು ಕಡಿಮೆ ಬೆಲೆಯ ಹಾಗೂ ಉತ್ತಮ ಪೌಷ್ಟಿಕ ಆಹಾರದ ಬಗ್ಗೆ ತಿಳುವಳಿಕೆ. | ಸಂಖ್ಯೆ 1 ರಿಂದ 9 ಮತ್ತು<br>10. ಬೇರೆ ಕಡೆಗಳಿಂದ ಕಳುಹಿಸಲ್ಪಟ್ಟ ಪ್ರಕರಣಗಳ ನಿರ್ವಹಣೆ. | ಸಂಖ್ಯೆ 1 ರಿಂದ 10 ಮತ್ತು<br>11. ಮದುಳಿಗೆ ಸಂಬಂಧಪಟ್ಟ ಹಾಗೂ ಎಲ್ಲಾ ಮಕ್ಕಳ ಕಾಯಿಲೆ ಬಗ್ಗೆ ನಿರ್ವಹಣೆ.<br>12. ಒಂದು ತಿಂಗಳೊಳಗಿನ ಮಕ್ಕಳಿಗೆ ವಿಶೇಷವಾಗಿ ಆರೈಕೆ ನೀಡುವ ಸಲುವಾಗಿ ಕೆಲವು ಪ್ರಥಮ ಮೇಲ್ಮಟ್ಟ ಘಟಕಗಳನ್ನು ಗುರುತಿಸಿ ಅಲ್ಲಿ ತರಬೇತಿ ನುರಿತ ಸಿಬ್ಬಂದಿಗಳನ್ನು ನೇಮಿಸಿ, ಉತ್ತಮ ಸೇವೆಗಳನ್ನು ನೀಡುವಿಕೆ. |

# ಅತ್ಯಾವಶ್ಯಕ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು
## (ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ವಿವರಗಳು)

| ಆರೋಗ್ಯ ಸಾಧಕಗಳು | ಸಮುದಾಯ ಮಟ್ಟ | ಉಪಕೇಂದ್ರ ಮಟ್ಟ | ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟ | ಪ್ರಥಮ ಮೇಲ್ಮಟ್ಟ ಘಟಕ ಅಥವಾ ಜಿಲ್ಲಾ ಆಸ್ಪತ್ರೆ ಮಟ್ಟ |
|---|---|---|---|---|
| 4. ಜನನಾಂಗ ಮಾರ್ಗದ ಸೋಂಕು (ಜಮಾಸೋ) ಮತ್ತು ಲೈಂಗಿಕ ಸಂಪರ್ಕದ ಸೋಂಕು (ಲೈಸಂಸೋ) | 1. ಮಾಹಿತಿ, ಶಿಕ್ಷಣ ಮತ್ತು ಸಂವಾಹನೆಯ ಮೂಲಕ ಈ ಸೋಂಕುಗಳ ಬಗ್ಗೆ ಅರಿವು ಮೂಡಿಸುವಿಕೆ.<br>2. ಕಾಂಡೋಂ (ನಿರೋಧ್) ಇವುಗಳನ್ನು ವಿತರಿಸುವಿಕೆ.<br>3. ಸಂತಾನೋತ್ಪತ್ತಿ ಅವಧಿಯಲ್ಲಿರುವ ಮಹಿಳೆಯರಿಗೆ ಶುಚಿಯಾದ ''ಸ್ಯಾನಿಟರಿ-ಪ್ಯಾಡ್''ಗಳನ್ನು ಉಪಯೋಗಿಸುವಂತೆ ತಿಳುವಳಿಕೆ ನೀಡುವುದು.<br>4. ಜನನಾಂಗ ಶುಚಿತ್ವ ಮತ್ತು ವೈಯಕ್ತಿಕ ಶುಚಿತ್ವದ ಬಗ್ಗೆ ತಿಳಿಹೇಳುವಿಕೆ. | ಸಂಖ್ಯೆ 1 ರಿಂದ 4 ಮತ್ತು<br>5. ಮಹಿಳೆಯರಲ್ಲಿ ಯೋನಿಯಿಂದ ಸ್ರಾವ ಹೊರಬರುವಿಕೆ, ಕೆಳ ಹೊಟ್ಟೆನೋವು, ಜನನಾಂಗ ದ್ವಾರದಲ್ಲಿ ಹುಣ್ಣುಗಳು ಮತ್ತು ತೊಡ ಸಂದುಗಳಲ್ಲಿ ಊತ ಇವುಗಳನ್ನು ಗುರುತಿಸಿ ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>6. ''ಗುಂಪು ಚಿಹ್ನೆ''ಗಳ (ಸಿಂಡ್ರೋಂ) ಆಧಾರಿತ ಜಮಾಸೋ ಮತ್ತು ಲೈಸಂಸೋ ಇವುಗಳ ಪತ್ತೆ ಹಚ್ಚುವಿಕೆಯ ಒಂದು ಪ್ರಥಮ ಪ್ರಯತ್ನ.<br>7. ಮಾಮೂಲಿನ ಚಿಕಿತ್ಸೆಗೆ ಪ್ರತಿಸ್ಪಂದಿಸದಿದ್ದ ಪ್ರಕರಣಗಳನ್ನು ಮೇಲ್ಮಟ್ಟಕ್ಕೆ ಕಳುಹಿಸುವಿಕೆ.<br>8. ಲೈಂಗಿಕ ಸಂಪರ್ಕವಿರುವ ಜೊತೆಗಾರರನ್ನು ಪತ್ತೆ ಹಚ್ಚಿ ಚಿಕಿತ್ಸೆ. | ಸಂಖ್ಯೆ 1 ರಿಂದ 8 ಮತ್ತು<br>9. ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕ ಸೋಂಕು ಇವುಗಳನ್ನು ಪ್ರಯೋಗಾಲಯದಲ್ಲಿ ಪತ್ತೆ ಹಚ್ಚುವಿಕೆ ಮತ್ತು ಸೂಕ್ತ ಚಿಕಿತ್ಸೆ. | ಸಂಖ್ಯೆ 1 ರಿಂದ 9 ಮತ್ತು<br>10. ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕದ ಸೋಂಕು ಇವುಗಳನ್ನು ಪ್ರಯೋಗಾಲಯದಲ್ಲಿ ಪತ್ತೆ ಹಚ್ಚುವಿಕೆ ಮತ್ತು ಸೂಕ್ತ ಚಿಕಿತ್ಸೆ.<br>11. ಗರ್ಭಿಣಿಯರಲ್ಲಿ, ಬಾಣಂತಿಯರಲ್ಲಿ ಮತ್ತು ಅಪಾಯಕಾರಿ ಗುಂಪಿನವರಿಗೆ ''ಸಿಫಿಲಿಸ್'' ಮತ್ತು ಇತರೇ ಗುಹ್ಯರೋಗ ಕಾಯಿಲೆಗೆ ಪ್ರಯೋಗಾಲಯದಲ್ಲಿ ಪರೀಕ್ಷೆ. |